# ಕನ್ನಡ ಪೋಸ್ಟ್

ಇದು ಸುದ್ದಿ ವಿಲಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ  Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 129 | Pages. 2 | Date: 22-03-2025, SATURDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 129 - ಪುಟಗಳು : 2 - 22 ಮಾರ್ಚ್ 2025 ಶನಿವಾರ | Ph: 8762954248 | ದರ : ₹1


# ಎಸ್‌ಎಸ್‌ಎಲ್‌ಸಿ : ಮೊದಲ ದಿನ ಸುಸೂತ್ರ

## 143 ವಿದ್ಯಾರ್ಥಿಗಳು ಗೈರು

## ಶುಭ ಹಾರೈಸಿದ ಸಂಸದ ಶ್ರೇಯಸ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ರಾಜ್ಯಾದ್ಯಂತ ಮಾ. 21 ರಿಂದ ಏ. 4ರ ವರೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿದ್ದು ಮೊದಲ ದಿನದ ಕನ್ನಡ ಪರೀಕ್ಷೆ ಸುಸೂತ್ರವಾಗಿ ನಡೆದಿದೆ. ಜಿಲ್ಲಾದ್ಯಂತ 143 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಜಿಲ್ಲೆಯಲ್ಲಿ 77 ಪರೀಕ್ಷಾ ಕೇಂದ್ರ ತೆರೆಯಲಾಗಿದ್ದು, 20,344 ಮಕ್ಕಳು ಪರೀಕ್ಷೆ ಬರೆಯುತ್ತಿದ್ದಾರೆ. ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಸಿಸಿಟಿವಿ ಕ್ಯಾಮರಾ, ವೆಬ್ ಕಾಸ್ಟಿಂಗ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಪರೀಕ್ಷಾ ಕೇಂದ್ರ ಸುತ್ತಲು 200 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಪರೀಕ್ಷಾ ಜಾಗೃತ ದಳದ ಅಧಿಕಾರಿಗಳು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಪಾರದರ್ಶಕ ಚುನಾವಣೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದೆ.





ಶುಭ ಹಾರೈಸಿದ ಸಂಸದ ಶ್ರೇಯಸ್: ನಗರದ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಕಾಲೇಜಿನ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದ ಸಂಸದ ಶ್ರೇಯಸ್ ಪಟೇಲ್ ವಿದ್ಯಾರ್ಥಿಗಳಿಗೆ

ಹೂ ನೀಡಿ ಸ್ವಾಗತ ಕೋರಿದರು. ಈ ವೇಳೆ ಮಾತನಾಡಿ, ಧೈರ್ಯ ಮತ್ತು ಆತ್ಮಸ್ಥೈರ್ಯದಿಂದ ಎಲ್ಲಾ ಪರೀಕ್ಷೆಗಳನ್ನು ಚೆನ್ನಾಗಿ ಬರೆಯಿರಿ, ಇದೊಂದು ಪರೀಕ್ಷಾ ಹಬ್ಬ ಎಂದು ಶುಭ ಹಾರೈಸಿದರು.

ಜಿಲ್ಲಾಡಳಿತದ ಅಧಿಕಾರಿಗಳು ಹಾಗೂ ಡಿಡಿಪಿಐ, ಬಿಇಒಗಳು ಪರೀಕ್ಷೆ ಬರೆಯಲು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದಾರೆ ಎಂದರು.

ಈ ಬಾರಿ ನಮ್ಮ ಹಾಸನ ಜಿಲ್ಲೆ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ಮಕ್ಕಳನ್ನು ಪರೀಕ್ಷೆಗೆ ಸಿದ್ಧ ಮಾಡುವುದರಲ್ಲಿ ಸರ್ಕಾರಿ, ಖಾಸಗಿ ಸೇರಿ ಎಲ್ಲ ಶಿಕ್ಷಕರು, ಶ್ರಮ ಹಾಕಿದ್ದಾರೆ ಎಂದರು.

ಪ್ರಭಾರ ಡಿಡಿಪಿಐ ಹೆಚ್.ಎಸ್. ಚಂದ್ರಶೇಖರ್ ಮಾತನಾಡಿ, ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಯಾವುದೇ ಸಮಸ್ಯೆ ಆಗದಂತೆ ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯದಲ್ಲಿ ಏರು ಪೇರಾದರೆ ಚಿಕಿತ್ಸೆ ಗೆ ವ್ಯವಸ್ಥೆ, ಎಲ್ಲಕ್ಕಿಂತ ಮುಖ್ಯವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿದೆ ಎಂದರು.

ಪರೀಕ್ಷೆಯನ್ನು ಬಹಳ ಪಾರದರ್ಶಕವಾಗಿ ನಡೆಸಲಾಗುತ್ತಿದ್ದು, ಎಲ್ಲೆಡೆ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಜಿಪಂ ನಲ್ಲಿ ವೆಬ್ ಕ್ಯಾಸ್ಟಿಂಗ್ ನಿಯಂತ್ರಣ ಕೇಂದ್ರ ಅಳವಡಿಸಲಾಗಿದೆ. ಮಕ್ಕಳು ಒತ್ತಡ ರಹಿತವಾಗಿ ಪರೀಕ್ಷೆ ಬರೆಯಲು ಪೋಷಕರು ಅವಕಾಶ ಮಾಡಿಕೊಡಬೇಕು ಎಂದು ಕಿವಿಮಾತು ಹೇಳಿದರು.

ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬಿತ್ಯಾದಿ ಸುಳ್ಳು ವದಂತಿಗೂ ಕೂಡ ಕಿವಿಗೊಡಬಾರದು. ಮಾರ್ಚ್ 22 ರಂದು ಕರ್ನಾಟಕ ಬಂದ್ ಕರೆ ಕೊಡಲಾಗಿದ್ದರೂ, ಶನಿವಾರ ಪರೀಕ್ಷೆ ಇಲ್ಲದಿರುವುದರಿಂದ ಮಕ್ಕಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಪ್ರಶ್ನೆಗೆ ಉತ್ತರಿಸಿದರು.

ಎಸ್‌ಎಸ್‌ಎಲ್‌ಸಿ ಮೊದಲ ಪರೀಕ್ಷೆ ಬರೆಯಲು ಮಕ್ಕಳು ಶುಕ್ರವಾರ ಬೆಳಿಗ್ಗೆ 8.30 ರಿಂದಲೇ ಪರೀಕ್ಷಾ ಕೇಂದ್ರಗಳಲ್ಲಿ ಜಮಾಯಿಸಿದ್ದರು. ಕೆಲವರು ಕೊನೆ ಕ್ಷಣದಲ್ಲೂ ಕುಳಿತು ಓದುತ್ತಿದ್ದರೆ, ಇನ್ನೂ ಕೆಲ ವಿದ್ಯಾರ್ಥಿಗಳು ಕನ್ನಡ ಭಾಷೆ ಸುಲಭ ಇರಲಿದೆ ಎಂದು ಸಂತೋಷದಿಂದ ಸ್ನೇಹಿತರೊಡನೆ ಮಾತನಾಡಿ ಸಮಯ ಕಳೆಯುತ್ತಿದ್ದರು.

ಇನ್ನು ಸಲ್ಪ ಸಮಯ ತಡವಾಗಿ ಬಂದ ವಿದ್ಯಾರ್ಥಿಗಳು ಕೊಠಡಿ ಸಂಖ್ಯೆಯನ್ನು ಗಾಬರಿಯಿಂದ ನೋಟಿಸ್ ಬೋರ್ಡಿನಲ್ಲಿ ವೀಕ್ಷಣೆ ಮಾಡುತ್ತಿದ್ದು, ಈ ವೇಳೆ ಪೊಲೀಸ್ ಪೇದೆಯೊಬ್ಬರು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದರು. ಪರೀಕ್ಷಾ ಕೇಂದ್ರಗಳಲ್ಲಿ ತಪಾಸಣೆ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿ ಅವರೂ ಇದ್ದರು.

ನೋಂದಣಿ ಮಾಡಿಕೊಂಡಿದ್ದ 20,344 ವಿದ್ಯಾರ್ಥಿಗಳಲ್ಲಿ ಹಾಜರಾತಿ ಕೊರತೆ ಕಾರಣದಿಂದ ಹಾಲ್‌ಟಿಕೆಟ್ ಸಿಗದೆ 633 ಮಕ್ಕಳು ಪರೀಕ್ಷೆ ಬರೆಯುವ ಅವಕಾಶದಿಂದ ಹೊರಗುಳಿಯಬೇಕಾಯಿತು. 19,711 ಮಕ್ಕಳು ಪರೀಕ್ಷೆ ಬರೆದಿದ್ದಾರೆ.

ಸಕಲೇಶಪುರ ವರದಿ: ತಾಲ್ಲೂಕಿನ ಒಂಬತ್ತು ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಯಾವುದೇ ಅಡಚಣೆಯಿಲ್ಲದೆ ನಡೆದಿದೆ.

1,280 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದು, 632 ಹುಡುಗರು ಮತ್ತು 648 ಹುಡುಗಿಯರು ಪರೀಕ್ಷೆಗೆ ಹಾಜರಾದರು. ವಿದ್ಯಾರ್ಥಿಗಳ ಜೊತೆಗೆ ಪೋಷಕರು ಪರೀಕ್ಷಾ ಕೇಂದ್ರದ ಮುಂಭಾಗ ನಿಂತಿರುವುದು ಕಂಡುಬಂದಿತು. ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಅಕ್ರಮ ನಡೆಯದಂತೆ ಕಟ್ಟುನಿಟ್ಟಿನ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತು. 175 ಪರೀಕ್ಷಾ ಸಿಬ್ಬಂದಿ ಕಾರ್ಯನಿರ್ವಹಿಸಿದರು.

## ಆಟವಾಡಲು ಬಿಡದಿದ್ದಕ್ಕೆ ಶಾಲೆಗೆ ಬೆಂಕಿ




ಸಕಲೇಶಪುರ: ಶಾಲಾ ಮೈದಾನದಲ್ಲಿ ಆಟವಾಡಲು ಬಿಡದಿದ್ದಕ್ಕೆ ಕಿಡಿಗೇಡಿಗಳು ಶಾಲೆಗೆ ಬೆಂಕಿ ಹಚ್ಚಿದ ಘಟನೆ ಕಳೆದ ರಾತ್ರಿ ಬೆಳಗೋಡು ಹೋಬಳಿ, ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೀಚನಹಳ್ಳಿಯಲ್ಲಿ ನಡೆದಿದೆ.

ಕಿರುಹುಣಸೆ, ನೀಚನಹಳ್ಳಿಯಲ್ಲಿರುವ ಕಿರಿಯ ಪ್ರಾಥಮಿಕ ಶಾಲೆಯ ಕಟ್ಟಡಕ್ಕೆ ಬೆಂಕಿ ಹಚ್ಚಿ ಆರೋಪಿಗಳು ಪರಾರಿಯಾಗಿದ್ದಾರೆ. ಶಾಲಾ ಆವರಣವನ್ನು ಸುರಕ್ಷಿತವಾಗಿರಿಸಲು ಆಡಳಿತ ಮಂಡಳಿ ಹಾಗೂ ಎಸ್‌ಡಿಎಂಸಿ ಸದಸ್ಯರು ತಂತಿ ಬೇಲಿ ಹಾಕಿದರೂ, ಅದನ್ನು ಕೆಲ ದಿನಗಳ ಹಿಂದೆ ದುಷ್ಕರ್ಮಿಗಳು ತೆರವುಗೊಳಿಸಿದ್ದರು.

ಈ ಹಿಂದೆ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶಿಕ್ಷಕರ ಮೇಲೆ ಸಹ ಕಿಡಿಗೇಡಿಗಳು ದೌರ್ಜನ್ಯ ನಡೆಸಿದ್ದು, ಶಾಲೆಗೆ ಕೆಟ್ಟ ಹೆಸರು ತರಲು ಶಾಲಾ ಕೊಠಡಿ ಬಳಿ ಅಸಭ್ಯ ಕೃತ್ಯ ಎಸಗಿದ್ದಾರೆ. ಈ ಕುರಿತು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಂಟು ಮಂದಿಯ ವಿರುದ್ಧ ದೂರು ದಾಖಲಿಸಿದ್ದರೂ, ಪೊಲೀಸರು ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಮತ್ತೊಂದು ದುರ್ಘಟನೆ ಸಂಭವಿಸಲು ಕಾರಣವಾಗಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಶಾಲಾ ಕಟ್ಟಡಕ್ಕೆ ಬೆಂಕಿ ಹಚ್ಚಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಹಾಗೂ ಶಾಲಾ ಆಡಳಿತ ಮಂಡಳಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಪ್ರಕರಣದಲ್ಲಿ ಸೂಕ್ತ ಕ್ರಮ ಕೈಗೊಳ್ಳದೇ ಇದ್ದರೆ ಬೃಹತ್ ಮಟ್ಟದ ಪ್ರತಿಭಟನೆ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಸಿದ್ದಾರೆ.

## ಸೇತುವೆ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ಪಟ್ಟಣದಿಂದ ಗುಂಡಶೆಟ್ಟಿಗೆ ಸಂಪರ್ಕ ಕಲ್ಪಿಸುವ ರಸ್ತೆಗೆ ಪಟ್ಟಣದ ಅಮಾನಿಕೆರೆ ಬಳಿ ಇದ್ದ ಸೇತುವೆ ಸಂಪೂರ್ಣ ಶಿಥಿಲವಾಗಿದ್ದ ಕಾರಣ ಗ್ರಾಮಸ್ಥರಿಗೆ ಸಾರ್ವಜನಿಕರಿಗೆ ತೊಂದರೆಯಾಗಿದ್ದನ್ನು ಮನಗಂಡು ಹೇಮಾವತಿ ನಾಲಾ ವಿಭಾಗದಡಿ ಹೊಸದಾಗಿ ಸೇತುವೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ಕೆರೆ ಬಳಿ ನೂತನವಾಗಿ ನಿರ್ಮಿಸಿರುವ ಸೇತುವೆಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಹೇಮಾವತಿ ನಾಲಾ ವಿಭಾಗದಡಿ 5 ಕೋಟಿ ರೂ. ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ 6 ಕಾಮಗಾರಿಗಳ ಪೈಕಿ ಅಮಾನಿಕೆರೆ ಬಳಿಯ ಸೇತುವೆ ನಿರ್ಮಾಣ ಸೇರಿದೆ ಎಂದರು.

ಸೇತುವೆ ಶಿಥಿಲವಾಗಿರುವುದರ ಜೊತೆಗ ತಗ್ಗಿನಿಂದ ಕೂಡಿದ ಸೇತುವೆಯಿಂದ ಕೆರೆಗೆ ನೀರು ಹೆಚ್ಚಾಗಿ ಸೇತುವೆಯ ಮೇಲೆ ಹರಿಯುತ್ತಿದ್ದರಿಂದ ಕೆರೆಯ ಇನ್ನೊಂದು ಬದಿಗೆ ತೆರಳಲು ಸಂಪರ್ಕ ಕಡಿತವಾಗುತ್ತಿತ್ತು. ಈ ಬಗ್ಗೆ ಸಾರ್ವಜನಿಕರು, ಗ್ರಾಮಸ್ಥರು ತಮ್ಮ ಗಮನಕ್ಕೆ ತಂದ ಹಿನ್ನೆಲೆ ಹೊಸದಾಗಿ ಸೇತುವೆ ಜೊತೆಗೆ 2 ಕಡೆ ಗೈಡ್‌ವಾಲ್ ನಿರ್ಮಾಣ ಮಾಡಲಾಗುತ್ತದೆ.

ಕಳೆದ ವರ್ಷ ಅತಿಯಾದ ಮಳೆಯ ಕಾರಣ ರಸ್ತೆಯ ಬಲಭಾಗದಲ್ಲಿರುವ ನಿವಾಸಿಗಳ ಮನೆಗಳಿಗೆ ನೀರು ನುಗ್ಗಿ ಪರಿಪಾಟಲು ಪಡುವ ಸ್ಥಿತಿ ಉಂಟಾಗಿತ್ತು. ಇದೀಗ ಸೇತುವೆ ನಿರ್ಮಾಣದಿಂದ ಮುಂದೆ ಎಂತಹ ಮಳೆ ಬಂದೂ ಕೆರೆ ಕೋಡಿ ಬಿದ್ದರೂ ಮನೆಗಳಿಗೆ ಮತ್ತು ರಸ್ತೆಗೆ ಹಾನಿಯಾಗುವುದಿಲ್ಲವೆಂದರು.

ನಗರ ಭಾಗದಿಂದ ಬರುವ ನೀರು ಮನೆಗಳ ಮುಂಭಾಗದ ಚರಂಡಿಯಲ್ಲಿ ಹರಿಯುತ್ತಿದ್ದು,

ಮಳೆ ಸಂದರ್ಭದಲ್ಲಿ ಹೆಚ್ಚಿನ ನೀರು ಹರಿದು ವಸತಿ ಪ್ರದೇಶಕ್ಕೆ ಹಾನಿ ಮಾಡುವ ಹಿನ್ನಲೆಯಲ್ಲಿ ತಡೆಗೋಡೆ ನಿರ್ಮಿಸಿಕೊಡುವಂತೆ ಸ್ಥಳೀಯ ನಿವಾಸಿಗಳು ಶಾಸಕರಿಗೆ ಮನವಿ ಮಾಡಿದ ಹಿನ್ನ ಸೇತುವೆ ಕಾಮಗಾರಿಯೊಂದಿಗೆ 25 ಮೀಟರ್ ತಡೆಗೋಡೆ ನಿರ್ಮಿಸಿಕೊಡಲಾಗುವುದೆಂದು ಆಶ್ವಾಸನೆ ನೀಡಿದರು.

ಪುರಸಭೆ ಅಧ್ಯಕ್ಷ ಸಿ.ಎನ್. ಮೋಹನ್, ಉಪಾಧ್ಯಕ್ಷೆ ರಾಣಿಕೃಷ್ಣ, ಸ್ಥಾಯಿ ಸಮಿತಿ ಅಧ್ಯಕ್ಷ ಸುರೇಶ್, ಪುರಸಭಾ ಸದಸ್ಯರಾದ ಗಣೇಶ್, ರಾಮು, ಮಾಜಿ ಸದಸ್ಯ ಪುಟ್ಟಸ್ವಾಮೀಗೌಡ, ಮುಖಂಡ ರಾಜು, ಗಾರೆ ಕೃಷ್ಣ, ಸಿ.ಆರ್.ಮಂಜುನಾಥ್, ದೊರೆಸ್ವಾಮಿ, ಆರೀಫ್, ಪುರಿಮಂಜು, ಜೆಇ ವಿಜಯ್, ಗುತ್ತೀಗೆದಾರ, ಗುತ್ತೇಗೆದಾರ ಬರಾಳು ಪ್ರಕಾಶ್ ಇತರಿದ್ದರು.

## ಸಾರ್ವಜನಿಕ ಆಸ್ಪತ್ರೆಯಲ್ಲಿ ರಾಷ್ಟ್ರ ಮಟ್ಟದ ವಿಚಾರ ಸಂಕಿರಣ




ಹೊಳೆನರಸೀಪುರ: ರಾಷ್ಟ್ರ ಮಟ್ಟದ ನಡೆಸಬಹುದಾದ ಯೂರೋ ಗೈನಕಾಲಜಿ ಕಾರ್ಯಾಗಾರ ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆಯುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸಾರ್ವಜನಿಕ ಆಸ್ಪತ್ರೆ, ಜಿಲ್ಲಾ ಸ್ತ್ರೀ ರೋಗ ಮತ್ತು ಪ್ರಸೂತಿ ತಜ್ಞರ ಸಂಘದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ಇಂತಹ ಕಾರ್ಯಾಗಾರಗಳು ಆಗಾಗ ನಡೆಯುತ್ತಿರುವುದರಿಂದ ಪ್ರಸೂತಿ ಬಗ್ಗೆ ವೈದ್ಯರು ಹೆಚ್ಚಿನ ಜ್ಞಾನ ಅರಿಯಲು ಸಾಧ್ಯವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

## ಕೆಎಸ್‌ಆರ್‌ಟಿಸಿ ನೌಕರರ ಗೃಹ ನಿರ್ಮಾಣ ಸಂಘದಲ್ಲಿ ಅವ್ಯವಹಾರ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಕೆಎಸ್‌ಆರ್‌ಟಿಸಿ ನಿಗಮದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಹೊನ್ನೇಗೌಡ ಅಂದಾಜು 35 ಕೋಟಿ ರೂ. ಭ್ರಷ್ಟಾಚಾರ ಎಸಗಿದ್ದು ಸಮಗ್ರ ತನಿಖೆ ಮೂಲಕ ಶಿಕ್ಷೆಗೆ ಗುರಿಪಡಿಸಬೇಕು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಟಿ. ರಂಗೇಗೌಡ ಆಗ್ರಹಿಸಿದರು.

ಸುದ್ದಿಗೋಷ್ಟಿಯಲ್ಲಿ ಶುಕ್ರವಾರ ಮಾತನಾಡಿ, ಸಂಘದ 15 ನಿರ್ದೇಶಕರ ಸ್ಥಾನಕ್ಕೆ ಮಾ. 23ರ ಭಾನುವಾರ ಚುನಾವಣೆ ನಡೆಯಲಿದೆ. ಹೊನ್ನೇಗೌಡ ಅವರ ಬಣವನ್ನು ಸೋಲಿಸಿ ಸಂಘವನ್ನು ಭ್ರಷ್ಟರಿಂದ ಮುಕ್ತಗೊಳಿಸಬೇಕಿದೆ ಎಂದರು.

2011 ರಿಂದ ಹೊನ್ನೇಗೌಡ ಎನ್ನುವ ವ್ಯಕ್ತಿಯನ್ನು ನಂಬಿಕೆ ಇಟ್ಟು ಅಧ್ಯಕ್ಷರನ್ನಾಗಿ ಮಾಡಿ ಎಲ್ಲಾ ನಿರ್ದೇಶಕರು ಸಹಕಾರ ನೀಡಿದೆವು. ಬಿ.ಟಿ. ಕಾಟೀಹಳ್ಳಿ ಬಡಾವಣೆಯಲ್ಲಿ 444 ನಿವೇಶನ ಹಂಚಿಕೆಯಲ್ಲಿ ಅನ್ಯಾಯ ಮಾಡಿದ್ದಾರೆ. ತಮ್ಮ ಹೆಂಡತಿ, ಅವರ ಅಣ್ಣ ಹಾಗೂ ಕುಟುಂಬ ಸೇರಿ ಒಟ್ಟು 15 ಜನರಿಗೆ ನಿವೇಶನ ಬರೆದುಕೊಂಡಿದ್ದಾರೆ ಎಂದು ಆರೋಪಿಸಿದರು. 19




ನಿವೇಶನಗಳನ್ನು ಬೇನಾಮಿಯಾಗಿ ಕ್ರಯ ಮಾಡಿಕೊಂಡಿದ್ದಾರೆ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ವ್ಯಾಪಕ ಅವ್ಯವಹಾರ ನಡೆದಿದೆ. ಹೊನ್ನೇಗೌಡ ಮತ್ತವರ ತಂಡ ವ್ಯವಸ್ಥಿತವಾಗಿ ನೌಕರರನ್ನು ಮತ್ತು ಅಧಿಕಾರಿಗಳನ್ನು ವಂಚಿಸಿ ಕೋಟ್ಯಂತರ ಹಣ ದೋಚಿದ್ದಾರೆ ಎಂದು ದೂರಿದರು. ನಿವೇಶನ ಹಂಚಿಕೆಯಲ್ಲಿ ಜೇಷ್ಠತೆ ಕಡೆಗಣಿಸಿ ಹಣ ನೀಡುವವರಿಗೆ ವಾಮಮಾರ್ಗದಲ್ಲಿ ಖಾಲಿ ನಿವೇಶನ ಹಂಚಿಕೆ ಮಾಡಿ, ಇನ್ನೂ ಸಾಕಷ್ಟು ಖಾಲಿ ನಿವೇಶನಗಳನ್ನು ಹಂಚಿಕೆ ಮಾಡದೆ ನೌಕರರಿಗೆ ದ್ರೋಹ ಮಾಡಿದ್ದಾರೆ. ತಮ್ಮ ಹಗರಣ, ವಂಚನೆ ಮುಚ್ಚಿ ಹಾಕಲು ಸಹಕರಿಸಿದ ಅಧಿಕಾರಿಗಳಿಗೆ ಕಿಕ್ ಬ್ಯಾಕ್ ಗಾಗಿ ಖಾಲಿ ನಿವೇಶನ ನೀಡುತ್ತಾ ಬಂದಿದ್ದಾರೆ ಎಂದರು.

## ಹನಿಟ್ರ್ಯಾಪ್ ರೂವಾರಿ ಡಿಸಿಎಂ ಶಿವಕುಮಾರ್: ಆರೋಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಅಧಿಕಾರದ ಆಸೆಯಿಂದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಲವು ರಾಜಕಾರಣಿಗಳಿಗೆ ಹನಿಟ್ರ್ಯಾಪ್ ಮಾಡಿದ್ದಾರೆ ಎಂದು ಬಿಜೆಪಿ ಮುಖಂಡ ದೇವರಾಜೇಗೌಡ ಆರೋಪಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರೇ ಹನಿಟ್ರ್ಯಾಪ್ ಮಾಡಿಸಿದ್ದಾರೆ. ಅವರೇ ನಿರ್ದೇಶಕ, ಅವರ ವಿರುದ್ಧ ಧ್ವನಿ ಎತ್ತಿದವರನ್ನು ಅಡಗಿಸಲು ಹನಿಟ್ರ್ಯಾಪ್ ಮಾಡಿಸಿದ್ದಾರೆ. ರಾಜ್ಯದಿಂದ ಕೇಂದ್ರಕ್ಕೆ ಹೋಗಿರುವವರು ಹನಿಟ್ರ್ಯಾಪ್‌ನಲ್ಲಿ ಸಿಲುಕಿದ್ದಾರೆ. ಹನಿಟ್ರ್ಯಾಪ್ ಮಾಡುವ ಡಿ.ಕೆ. ಶಿವಕುಮಾರ್ ಅವರ ಒಂದು ತಂಡವೇ



ಇದೆ. ಹನಿಟ್ರ್ಯಾಪ್ ಮಾಡಿ ಅದನ್ನು ಒಂದೆಡೆ ಗುಪ್ತವಾಗಿ ಇಡಲಾಗುತ್ತಿದೆ. ಅದನ್ನು ಪರಿಶೀಲನೆ ಮಾಡುವವರು ಇದ್ದಾರೆ. ಹನಿಟ್ರ್ಯಾಪ್ ವಿಚಾರಕ್ಕೆ ಸಂಬಂಧಪಟ್ಟಂತೆ ಕೆಲವು ಮಹತ್ವದ ದಾಖಲೆಗಳು ನಮ್ಮ ಬಳಿ ಇವೆ ಎಂದರು.

ಈಗಾಗಲೇ ಅದನ್ನು ಯಾರಿಗೆ ತಲುಪಿಸಬೇಕು, ಅವರಿಗೆ ತಲುಪಿಸಿ ಆಗಿದೆ. ಕೂಡಲೇ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು. ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐಗೆ ವಹಿಸಬೇಕು.

ಒಂದು ವರ್ಷದ ಹಿಂದೆಯೇ ನಾನು ಈ ಬಗ್ಗೆ ಹೇಳಿದ್ದೆ.

ಹನಿಟ್ರ್ಯಾಪ್ ಗ್ಯಾಂಗ್‌ಗೆ ಡಿ.ಕೆ. ಶಿವಕುಮಾರ್ ನಾಯಕರು. ಈಗ ಅವರ ಪಕ್ಷದ ಸಚಿವರಿಗೆ ಸತ್ಯ ಗೊತ್ತಾಗಿದೆ. ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಯತ್ನಿಸಿದವರ ಹನಿಟ್ರ್ಯಾಪ್ ಮಾಡಿದ್ದಾರೆ.

ಅಧಿಕಾರಕ್ಕಾಗಿ ಮುಖ್ಯಮಂತ್ರಿಯನ್ನೇ ಹನಿಟ್ರ್ಯಾಪ್ ಮಾಡುತ್ತಾರೆ ಗಂಭೀರ ಆರೋಪ ಮಾಡಿದರು.

## ದೆಹಲಿಯಲ್ಲಿ ‘ತಾಯಿಯಾಗುವುದೆಂದರೆ’ ಏಕವ್ಯಕ್ತಿ ರಂಗ ಪ್ರಯೋಗ ಇಂದು

ಹಾಸನ: ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಪೂಜಾ ರಘುನಂದನ್ ಅಭಿನಯದ ಹಾಗೂ ಕೃಷ್ಣಮೂರ್ತಿ ಕವತ್ತಾರ್ ನಿರ್ದೇಶನದ ಏಕವ್ಯಕ್ತಿ ತಾಯಿಯಾಗುವುದೆಂದರೆ.. ರಂಗಪ್ರಯೋಗ ಮಾ. 22ರ ಶನಿವಾರ ಸಂಜೆ ನವದೆಹಲಿಯ ಕರ್ನಾಟಕ ಭವನದಲ್ಲಿ ನಡೆಯಲಿದೆ.

ದೆಹಲಿಯ ಕರ್ನಾಟಕ ಸಂಘದಲ್ಲಿ ಮಹಿಳಾ ದಿನಾಚರಣೆ ಪ್ರಯುಕ್ತ ಆಯೋಜನೆಗೊಂಡಿರುವ ಈ ಕಾರ್ಯಕ್ರಮದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಮುಖ್ಯಸ್ಥೆ ಸುಧಾಮೂರ್ತಿ ಭಾಗವಹಿಸಲಿದ್ದಾರೆ.

ಪೂಜಾ ರಘುನಂದನ್ ಅಭಿನಯದಲ್ಲಿ ಪ್ರಣಮ್ಯ, ರಘುನಂದನ್ ಹಿನ್ನೆಲೆಯಲ್ಲಿ ಸಹಕರಿಸಲಿದ್ದಾರೆ. ಶಿವಮೊಗ್ಗದ ಪ್ರಸಿದ್ಧ ಬೆಳಕು ತಜ್ಞ ಹರಿಗೆ ಗೋಪಾಲಸ್ವಾಮಿ ಬೆಳಕು ನಿರ್ವಹಣೆ ಮಾಡಲಿದ್ದಾರೆ. ಪತ್ರಕರ್ತ, ಸಾಹಿತಿ ಚಲಂ ಹಾಡ್ಲಹಳ್ಳಿ ಗೀತ ಸಾಹಿತ್ಯವಿದ್ದು, ಹಾಸನದ ಡಾ. ಸಿಂಧೂ ಆತ್ರೇಯ ಧ್ವನಿಯಾಗಿದ್ದಾರೆ. ಹಾಸನದ ರಂಗ ಹೃದಯ ತಂಡದ ಉಪಾಧ್ಯಕ್ಷ ಗುರುರಾಜ್ ಒಟ್ಟಾರೆ ನಿರ್ವಹಣೆ ಮಾಡಲಿದ್ದಾರೆ.

ಪೂಜಾ ರಘುನಂದನ್ ರಚನೆ, ಅಭಿನಯದ ತಾಯಿಯಾಗುವುದೆಂದರೆ... ಏಕವ್ಯಕ್ತಿ ರಂಗಪ್ರಯೋಗ ( 70 ನಿಮಿಷಗಳ ಕಾಲ ರಂಗದಲ್ಲಿ ಒಬ್ಬರೇ




ಅಭಿನಯಿಸುವುದು )ವಷ್ಟೇ ಆಗಿರದೇ ಅನೇಕ ಸಾಮಾಜಿಕ ಬದಲಾವಣೆಗಳಿಗೆ ಕಾರಣವಾಗಿದೆ. ಈ ವಿಚಾರ ರಂಗಕ್ಕೆ ಬಂದ ಕಥೆಯೇ ಕುತೂಹಲಕಾರಿಯಾಗಿದೆ.

ಸಾಮಾನ್ಯವಾಗಿ ಸಂಸಾರ ಗುಟ್ಟು, ವ್ಯಾಧಿ ರಟ್ಟು ಎಂಬಂತೆ ಜನರು ನಡೆದುಕೊಳ್ಳುತ್ತಾರೆ. ಆದರೆ, ಸಮಾಜದ ಬಗ್ಗೆ ಸದಾ ಚಿಂತಿಸುವ ಪೂಜಾ ರಘುನಂದನ್, ತಮ್ಮ ಬದುಕಿನಲ್ಲಿ ನಡೆದ ಸತ್ಯ ಘಟನೆ ಹಾಗೂ ತಮ್ಮ ತಾಯ್ತನದ ವಿಚಾರವನ್ನು ಅವಧಿ- ಅಂತರ್ಜಾಲ ಸಾಹಿತ್ಯ ಪತ್ರಿಕೆಗೆ ಬರೆದು ಕಳುಹಿಸಿದ್ದರು. ಅದರಲ್ಲಿ ಪ್ರಕಟವಾದ ಇದನ್ನು ಓದಿದ ಅನೇಕರು ಪ್ರಶಂಸಿದ್ದರು. ಖ್ಯಾತ ರಂಗನಿರ್ದೇಶಕ, ಕಲಾವಿದ ಕೃಷ್ಣಮೂರ್ತಿ ಕವತ್ತಾರ್ ಇದನ್ನು ಓದಿ ಸ್ಫೂರ್ತಿಗೊಂಡು ಇದನ್ನು ಏಕವ್ಯಕ್ತಿ ಪ್ರಯೋಗವಾಗಿಸುವ ಬಗ್ಗೆ ತಿಳಿಸಿದರು. ಪೂಜಾ ತಡಮಾಡದೇ ಪತಿ ಹಾಗೂ ಕುಟುಂಬದವರ ಒಪ್ಪಿಗೆ ಪಡೆದು ರಂಗತಾಲೀಮು ಆರಂಭಿಸಿ, ರಂಗಕ್ಕೆ ತಂದೇಬಿಟ್ಟರು. ಇದೇ ತಾಯಿಯಾಗುವುದೆಂದರೆ...ಏಕವ್ಯಕ್ತಿ ರಂಗಪ್ರಯೋಗ. ಇದು ಯಶಸ್ವಿ ರಂಗಪ್ರಯೋಗವಾಗಿ ಜನರ ಮನಸ್ಸಿನಲ್ಲಿ ಅಚ್ಚೊತ್ತಿದೆ.

ಇವರ ಈ ಪ್ರಯೋಗ ಹಾಸನದ ಕಲಾಭವನ, ಸಾಣೆಹಳ್ಳಿ, ಬೆಂಗಳೂರಿನ ಕೆ.ವಿ. ಸುಬ್ಬಣ್ಣ ಆಪ್ತರಂಗ ಮಂದಿರ, ಮೈಸೂರು ರಂಗಾಯಣ, ನಟನ, ಬೆಳಗಾವಿಯ ರಂಗಸಂಪದ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ಕುಂದಾಪುರ, ಶಿವಮೊಗ್ಗ ರಂಗಾಯಣ ಹೀಗೆ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರಯೋಗಗೊಂಡಿತು. ಈ ಪ್ರಯೋಗವನ್ನು ವೀಕ್ಷಿಸಿದ ಸಾಣೆಹಳ್ಳಿಯ ಶ್ರೀಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಖ್ಯಾತ ಚಿತ್ರನಟ, ರಂಗಕರ್ಮಿ ಮಂಡ್ಯ ರಮೇಶ್, ಚಿತ್ರಕರ್ಮಿ ವಿ. ಮನೋಹರ್, ವಿವಿಧ ಜನಪ್ರತಿನಿಧಿಗಳು ಇನ್ನೂ ಮೊದಲಾದ ಗಣ್ಯಾತಿಗಣ್ಯರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಕಾನೂನು ಪ್ರಕಾರ ದತ್ತು ಸ್ವೀಕಾರದ ಕುರಿತಾಗಿ ಅರಿವು ಮೂಡಿಸುವ ಹಾಗೂ ದತ್ತು ಪ್ರಕ್ರಿಯೆ ಕುರಿತ ಅನೇಕ ಮೌಲ್ಯಗಳನ್ನು ತೊಡೆದು ಹಾಕುವ ವಿಷಯ ಹೊಂದಿರುವ ಈ ರಂಗಪ್ರಯೋಗದಿಂದ ಸ್ಫೂರ್ತಿಗೊಂಡ ಮಗುವಿನ ಅಪೇಕ್ಷೆಯುಳ್ಳ ಅನೇಕರು ಕಾನೂನಾತ್ಮವಾಗಿ ದತ್ತು ಪ್ರಕ್ರಿಯೆಗೆ ಮುಂದಾಗಿರುವುದು ಪೂಜಾ ರಘುನಂದನ್ ಹಾಗೂ ರಂಗ ಹೃದಯ ಕಲಾ ತಂಡದ ಸಾಮಾಜಿಕ ಕಳಕಳಿಗೆ ಹಿಡಿದ ಕನ್ನಡಿಯಾಗಿದೆ. ಇಷ್ಟ ಇಲ್ಲದೆ ಈ ರಂಗ ಪ್ರಯೋಗದಿಂದ ಸಂಗ್ರಹವಾದ ಲಕ್ಷಾಂತರ ರೂಪಾಯಿ ಹಣವನ್ನು ಕ್ಯಾನ್ಸರ್ ರೋಗಿಗಳ ವೈದ್ಯಕೀಯ ವೆಚ್ಚಕ್ಕಾಗಿಯೂ ಹಾಗೂ ಶಾಲೆಯೊಂದರ ನವೀಕರಣಕ್ಕಾಗಿಯೂ ನೀಡಿರುವುದು ಗಮನಾರ್ಹ ಸಂಗತಿ.

ಸುಧಾಮೂರ್ತಿ ಇನ್ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಅವರ ವೈಯಕ್ತಿಕ ಆಸ್ಥೆಯಿಂದ ಈ ರಂಗಪ್ರಯೋಗ ಆಯೋಜನೆಗೊಂಡಿದೆ. ಇವರ ಜೊತೆಗೆ ರಾಜ್ಯಸಭಾ ಸಂಸದರ ಆಪ್ತ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ರಾಜ್ಯ ಘಟಕದ ನೂತನ ಅಧ್ಯಕ್ಷ ಅರುಣ್ ಅವರ ಕಾಳಜಿಯಿಂದಾಗಿ ದೆಹಲಿಯಲ್ಲಿ ಪ್ರದರ್ಶನಗೊಳ್ಳುತ್ತಿದೆ.

# ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರ ಛಾಪು: ಅಶೋಕ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಬೇಲೂರು: ಮಹಿಳೆಯರು ಇತ್ತೀಚಿನ ದಿನಗಳಲ್ಲಿ ಎಲ್ಲಾ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡುವ ಮೂಲಕ ತನ್ನದೆಯಾದ ಛಾಪು ಮೂಡಿಸಿದ್ದಾರೆ ಎಂದು ಪುರಸಭೆ ಅಧ್ಯಕ್ಷ ಎ.ಆರ್. ಅಶೋಕ್ ಹೇಳಿದರು.

ಪಟ್ಟಣದ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ತಾಲ್ಲೂಕು ಒಕ್ಕಲಿಗರ ಮಹಿಳಾ ಸಂಘದಿಂದ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿವರ್ಷ ಮಾ. 8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಡೆಸುವ ವಾಡಿಕೆ ಬೆಳೆದು ಬಂದಿದೆ. ಜಗತ್ತನ್ನು ಆವರಿಸಿದ ಮಹಿಳೆಗೆ ಒಂದು ದಿನದ ಆಚರಣೆ ಸಾಲದು ಇಡೀ ವರ್ಷಪೂರ್ತಿ ಸ್ತ್ರೀ ಪರ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಕರೆ ನೀಡಿದರು.

ತಾಯಿ, ತಂಗಿ, ಅಕ್ಕ, ಸೊಸೆ, ಮಗಳು, ಅತ್ತೆ ಹೀಗೆ ವಿವಿಧ ಸ್ತರದಲ್ಲಿ ಗುರುತಿಸಿಕೊಂಡ ಸ್ತ್ರೀ ಮನುಕುಲವನ್ನು ಆವರಿಸಿಕೊಂಡಿದ್ದಾಳೆ. ಇಂತಹ ಮಹಿಳೆ ಇತ್ತೀಚಿನ ದಿನಗಳಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ವಿವಿಧ ಕ್ಷೇತ್ರದ ಅಗಮ್ಯ ಸಾಧನೆ ಮಾಡಿರುವ ಮಹಿಳೆಗೆ ಗೌರವ ನೀಡುವ ಕೆಲಸ ನಡೆಯಬೇಕು. ಈಗಾಗಲೇ ಸರ್ಕಾರ ಮಹಿಳೆಯರಿಗೆ ಗ್ರಾಮ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಮತ್ತು ಪುರಸಭಾ ಚುನಾವಣೆಯಲ್ಲಿ ಸಮಾನ ಸ್ಥಾನ ನೀಡಿದೆ. ಆದರೆ ಲೋಕಸಭಾ ಮತ್ತು ವಿಧಾನಸಭೆಯಲ್ಲಿ ಸಮಾನ ಮೀಸಲಾತಿ ನೀಡುವ ಕಡೆ ಗಮನ ನೀಡಬೇಕು ಎಂದು ಒತ್ತಾಯಿಸಿದ ಅವರು ಚೈತನ್ಯಧಾಯಕ ಚಿಲುಮೆಗೆ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕಿದೆ ಎಂದು ಹೇಳಿದರು.

ಅಬಕಾರಿ ನಿರೀಕ್ಷಕಿ ಅಪೂರ್ವ ಆದಿತ್ಯ ಮಾತನಾಡಿ, ಮಹಿಳೆ ಇತ್ತೀಚಿನ ದಿನದಂದು ಬಹುತೇಕ ಎಲ್ಲಾ ಕ್ಷೇತ್ರದಲ್ಲಿ ತನ್ನದೆಯಾದ ಛಾಪು ಮೂಡಿಸಿದ್ದಾರೆ. ಅದಕ್ಕೆ ಪ್ರಮುಖ ಉದಾಹರಣೆ ಸುನಿತಾ ಮಿಲಿಯಮ್ಸ್ ಬಾಹ್ಯಾಕಾಶದಲ್ಲಿ ಸತತ ಒಂಬತ್ತು ತಿಂಗಳ ವಿವಿಧ ಸಾಧನೆ ಮಾಡಿದ್ದಾರೆ. ಜಗತ್ತಿನಲ್ಲಿ ಮಹಿಳೆ ಮತ್ತು ಪುರುಷರು ಅಂತರ ಕಾಣದೆ ಸಾಧನೆ ಮಾತ್ರ ಮೀಸಲಿಡಿ, ಪ್ರಸಕ್ತ ದಿನಮಾನದ ಮಹಿಳೆಯರಿಗೆ ಹೆಚ್ಚು ಹೆಚ್ಚು ಅನಾರೋಗ್ಯ ಕಾಡುತ್ತಿರುವ ಹಿನ್ನೆಲೆಯಲ್ಲಿ ಮಹಿಳೆಯರು ಆರೋಗ್ಯದ ಕಡೆ ಗಮನ ನೀಡಿ, ಯೋಗ ಮತ್ತು ಆಹಾರದ ಜೀವನ ಶೈಲಿಯನ್ನು ಅಳವಡಿಸಿಕೊಂಡು ತನ್ನ ಕುಟುಂಬದ ಸ್ವಾಸ್ಥ್ಯವನ್ನು ಕಾಪಾಡಬೇಕು ಎಂದು ಕರೆ ನೀಡಿದರು.

ತಾಲ್ಲೂಕು ಒಕ್ಕಲಿಗರ ಮಹಿಳಾ ಸಂಘದ ಅಧ್ಯಕ್ಷೆ ವೈ.ಆರ್. ಭಾರತೀಗೌಡ ಮಾತನಾಡಿ, ಮಹಿಳೆಯರು ಸ್ವಾವಲಂಬಿ ಬದುಕಿಗೆ ಸಂಘಟನೆ ಪ್ರಮುಖವಾಗಿದೆ. ಈ ಕಾರಣದಿಂದ ಮಹಿಳೆಯರನ್ನು ಒಂದು ಕಡೆ ಸೇರಿಸಿ ಅವರಿಗೆ ಅವಕಾಶ ಮತ್ತು ಪ್ರತಿಭೆಗಳಿಗೆ ಸೂಕ್ತ ವೇದಿಕೆ ನೀಡುವ ಕೆಲಸವನ್ನು ಮಾಡುತ್ತಿದೆ. ತಾಲ್ಲೂಕು ಒಕ್ಕಲಿಗರ ಮಹಿಳಾ ಸಂಘ ಈಗಾಗಲೇ ಏಳು ವರ್ಷದಿಂದ ಮಹಿಳಾ ದಿನಾಚರಣೆ ಅಂಗವಾಗಿ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿದೆ. ಕ್ರಿಯಾಶೀಲತೆಯಿಂದ ಮಾತ್ರ ಸದೃಢ ಆರೋಗ್ಯ ಪಡೆಯಬಹುದು ಎಂದು ಹೇಳಿದರು.

ಪುರಸಭಾ ಸದಸ್ಯ ಬಿ.ಸಿ. ಜಗದೀಶ್, ಮಾಜಿ ಅಧ್ಯಕ್ಷೆ ಮುದ್ದಮ್ಮ, ಗೌರಧ್ಯಕ್ಷೆ ಶ್ರೀದೇವಿ ಮೊಗಣ್ಣಗೌಡ, ಕಾರ್ಯದರ್ಶಿ ಕವಿತಾ ಮಹೇಶ್, ಖಜಾಂಚಿ ಉಷಾ ಮಂಜುನಾಥ, ವೀಣಾ ಸುರೇಶ್ ಇತರರಿದ್ದರು.

# ಅಂಗಡಿ ಮೇಲೆ ಎಫ್‌ಎಸ್‌ಎಸ್‌ಐ ದಾಳಿ



ಹಾಸನ: ಆಹಾರ ಸುರಕ್ಷತೆ ಮತ್ತು ಔಷಧಾಡಳಿತ ಇಲಾಖೆ ವತಿಯಿಂದ ಗುರುವಾರ ನಗರ ಬಸ್ ನಿಲ್ದಾಣ ವ್ಯಾಪ್ತಿಯ ಅಂಗಡಿಗಳ ಮೇಲೆ ದಿಢೀರ್ ದಾಳಿ ನಡೆಸಿ ಪರಿಶೀಲಿಸಲಾಯಿತು.

ಅಂಕಿತಾಧಿಕಾರಿ ಡಾ. ಅನಿಲ್ ಧವನ್ ಅವರ ಆದೇಶ ಮತ್ತು ಮಾರ್ಗದರ್ಶನದಲ್ಲಿ ದಿಢೀರ್ ದಾಳಿ ನಡೆಸಲಾಯಿತು. ಬೇಕರಿ, ವಿವಿಧ ಹಣ್ಣು ಮಾರಾಟ ಅಂಗಡಿ, ಪಾನಿಪುರಿ ಮಾರಾಟ ಸ್ಟಾಲ್, ಕಾಂಡಿಮೆಂಟ್ಸ್ ಅಂಡ್ ಚಾಟ್ಸ್, ಜ್ಯೂಸ್ ಟೀ ಮಾರಾಟ ಅಂಗಡಿಗಳಿಗೆ ಭೇಟಿ ನೀಡಿ ಅಲ್ಲಿದ್ದ ತಿನಿಸು, ಸ್ವಚ್ಛತೆ ಕುರಿತು ಪರಿಶೀಲಿಸಿದರು.

ಈ ಹಿಂದೆಯೇ ಉದ್ದಿಮೆ ಪರವಾನಗಿ ಪತ್ರ, ಹಾಗೂ ಆಹಾರ ಗುಣಮಟ್ಟದ ಲೈಸೆನ್ಸ್ ಪಡೆಯಲು ತಿಳಿಸಲಾಗಿತ್ತು. ಆದರೂ ಬಹುತೇಕರು ಯಾವುದೇ ಪರವಾನಗಿ ಪಡೆಯದೇ ಇರುವುದು ತಪಾಸಣೆ ವೇಳೆ ಕಂಡು ಬಂತು. ಪರವಾನಗಿ ಸೂಚನೆ ಪಾಲನೆ ಮಾಡದೆ ಅಂಗಡಿಗಳ ಮಾಲೀಕರಿಗೆ ಸ್ಥಳದಲ್ಲೇ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದರು.

ಕೂಡಲೇ ಲೈಸೆನ್ಸ್ ಪಡೆಯಬೇಕು. ಮುಂದೆಯೂ ಇದೇ ರೀತಿಯ ನಿರ್ಲಕ್ಷ್ಯ ಮುಂದುವರಿದರೆ ಕಾನೂನು ರೀತಿ ಸೂಕ್ತ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಎಲ್ಲಕ್ಕಿಂತ ಮುಖ್ಯವಾಗಿ ಬೇಸಿಗೆ ಸಮಯ ಆಗಿರುವುದರಿಂದ ಸ್ವಚ್ಛತೆಗೆ ಒತ್ತು ನೀಡಬೇಕು. ಗುಣಮಟ್ಟದ ಹಣ್ಣು, ಆಹಾರ ಪದಾರ್ಥಗಳನ್ನು ಮಾರಾಟ ಮಾಡಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು.

ಇದೇ ವೇಳೆ ಅವಧಿ ಮೀರಿದ ಆಹಾರ ಪದಾರ್ಥಗಳನ್ನು ವಶಪಡಿಸಿ ಕೊಳ್ಳಲಾಯಿತು ಹಾಗೂ ಅನುಮಾನಾಸ್ಪದವಾಗಿ ಕಂಡು ಬಂದ ಆಹಾರ ಪದಾರ್ಥಗಳನ್ನು ಪರಿಶೀಲಿಸಲು ಪ್ರಯೋಗಾಲಯಕ್ಕೆ ಕಳಿಸಲಾಯಿತು.

ಆಹಾರ ಸುರಕ್ಷತಾ ಅಧಿಕಾರಿಗಳಾದ ಹಡಬಸವೇಗೌಡ, ಕೆ. ವಿನಯ್, ಎಂ.ಎನ್. ಶಿವರಾಮು ಇತರರಿದ್ದರು.

# ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ




ಬೇಲೂರು: ಹತ್ತಾರು ವರ್ಷ ಬಾಳಿಕೆ ಬರುವಂತೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಬೇಕು ಎಂದು ಪುರಸಭಾಧ್ಯಕ್ಷ ಆರ್. ಅಶೋಕ್ ಸೂಚಿಸಿದರು.

ಮುಖ್ಯ ರಸ್ತೆಯಿಂದ ಹೊಳೆ ಬೀದಿಗೆ ಸಂಪರ್ಕ ಕಲ್ಪಿಸುವ ಪಪ್ಪಿಬೀದಿ ರಸ್ತೆಯ ಕಾಂಕ್ರಿಟ್ ಕಾಮಗಾರಿ ಪರಿಶೀಲನೆ ನಡೆಸಿ ಮಾತನಾಡಿದ ಅವರು, 13 ಲಕ್ಷ ರೂ. ವೆಚ್ಚದ ಅನುದಾನದಡಿ ಪಪ್ಪಿ ಬೀದಿ, ಹನುಮಂತನಗರ, ಪುರಿಬಟ್ಟಿ ಬೀದಿಯಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದೆ. ಈ ರಸ್ತೆ ಪೂರ್ಣ ಹದಗೆಟ್ಟಿತ್ತು. ಸ್ಥಳೀಯರು ಇಲ್ಲಿನ ಸದಸ್ಯರು ಹಲವು ಬಾರಿ ದುರಸ್ತಿಗೆ ಮನವಿ ಮಾಡಿದ್ದರ ಫಲವಾಗಿ ಯೋಜನೆ ಅನುದಾನದಿಂದ ಕಾಮಗಾರಿ ನಡೆಯುತ್ತಿದೆ. ಸ್ಥಳೀಯರು ಕಾಮಗಾರಿ ನಡೆಯುವಾಗ ಗಮನ ಹರಿಸಿ ಕಳಪೆ ಕಂಡುಬಂದರೆ ತಡೆದು ಉತ್ತಮ ರೀತಿಯಲ್ಲಿ ನಡೆಸುವಂತೆ ಸೂಚಿಸಬೇಕು ಎಂದು ಹೇಳಿದರು.

ರಸ್ತೆ ನಿರ್ಮಾಣ ಮಾಡುವಾಗ ಎರಡೂ ಬದಿಯಲ್ಲಿ ಜಾಗ ಬಿಡದೆ ಸಂಪೂರ್ಣವಾಗಿ ಕಾಂಕ್ರೀಟ್ ಹಾಕುವ ಮೂಲಕ ಉತ್ತಮವಾದ ರಸ್ತೆ ನಿರ್ಮಿಸಬೇಕು ಎಂದು ಗುತ್ತಿಗೆದಾರರಿಗೆ ಸೂಚಿಸಿ ರಸ್ತೆ ಬದಿಯಲ್ಲಿ ಮನೆಗಳನ್ನು ನಿರ್ಮಿಸಿಕೊಂಡಿರುವವರು ರಸ್ತೆ ಮೇಲೆ ಗಿಡಗಳು ಸೇರಿ ತುಳಸಿ ಕಟ್ಟೆಗಳನ್ನ ಕಟ್ಟಿಕೊಂಡು ಸಸಿಗಳನ್ನು ಬೆಳೆಯದೆ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದರು. ಆರೋಗ್ಯಾಧಿಕಾರಿ ಲೋಹಿತ್ ಇತರರಿದ್ದರು.

# ಏ.13-14ಕ್ಕೆ ಬಸವೇಶ್ವರ ದೇಗುಲ ಲೋಕಾರ್ಪಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಅರಕಲಗೂಡು: ಪಟ್ಟಣದ ದೊಡ್ಡಮಠದ ಆವರಣದಲ್ಲಿ ಒಂದು ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಚೆನ್ನಬಸವೇಶ್ವರರ ಗದ್ದುಗೆ ದೇವಸ್ಥಾನದ ಲೋಕಾರ್ಪಣೆ ಸಮಾರಂಭ ಏ. 13 ಮತ್ತು 14ರಂದು ನಡೆಯಲಿದೆ ಎಂದು ದೊಡ್ಡಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ತಿಳಿಸಿದರು.

ಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೊಡ್ಡಮಠಕ್ಕೆ ಐತಿಹಾಸಿಕ ಪರಂಪರೆ ಇದ್ದು, ಈ ಹಿಂದೆ ಮಠದ ಒಳಗೆಯೇ ಗದ್ದುಗೆ ಇತ್ತು. ಹಿಂದಿನ ಸ್ವಾಮೀಜಿ ಸದಾ ಕಾಲ ಪೂಜೆ ನೆರವೇರಿಸುತ್ತಾ ಬಂದಿದ್ದರು. ಆ ಜಾಗವನ್ನು ಹಾಗೆಯೇ ಸಂರಕ್ಷಣೆ ಮಾಡಿ ಪಕ್ಕದಲ್ಲಿ ಹೊಸದಾಗಿ ಮಠವನ್ನು ನಿರ್ಮಾಣ ಮಾಡಲಾಗಿದೆ. ಗದ್ದುಗೆ ಇರುವ ಜಾಗದಲ್ಲಿ ದೇವಸ್ಥಾನ ನಿರ್ಮಾಣಗೊಂಡಿದೆ. ಜಿಲ್ಲೆ, ರಾಜ್ಯ ಹಾಗೂ ದೇಶದಾದ್ಯಂತ ಮಠದ ಅಪಾರ ಸಂಖ್ಯೆಯ ಭಕ್ತರು ಇದ್ದಾರೆ. ಅವರೆಲ್ಲರ ಸಹಕಾರದಿಂದ ಮಠದಲ್ಲಿಯೇ ಜೀವಂತ ಸಮಾಧಿಯಾಗಿರುವ ಚೆನ್ನಬಶವೇಶ್ವರರ ಗದ್ದುಗೆಯನ್ನು ಪೂಜಾದಿಗೆ ದೇವಸ್ಥಾನದಂತೆ ಅಭಿವೃದ್ಧಿಗೊಳಿಸಲಾಗಿದೆ. ಏಪ್ರಿಲ್ 13ರ ಮೊದಲ ದಿನದ ಎಲ್ಲಾ ಕಾರ್ಯಗಳು ತುಮಕೂರಿನ ಸಿದ್ದಗಂಗೆಯ ಶ್ರೀಗಳಾದ ಸಿದ್ದಲಿಂಗ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆಯಲಿವೆ.

ಏ. 14ರಂದು ಮೈಸೂರಿನ ಸುತ್ತೂರು ಶ್ರೀಗಳ ನೇತೃತ್ವದಲ್ಲಿ ಜರುಗಲಿವೆ ಎಂದರು.

ನೂತನ ಚೆನ್ನಬಸವೇಶ್ವರರ ಗದ್ದುಗೆ ದೇವಸ್ಥಾನವು ಶಿವಶರಣರು ಮತ್ತು ಶಿವಯೋಗಿಗಳ ಪರಿವಾರದಲ್ಲಿ ನಿರ್ಮಾಣಗೊಂಡಿದೆ.

ಮಠಕ್ಕೆ 18 ಕೋಮಿನ ಭಕ್ತರು ಇದ್ದಾರೆ. ಇದೇ ಸಂದರ್ಭದಲ್ಲಿ ಸಾಮೂಹಿಕ ದೀಕ್ಷೆ ಮತ್ತು ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಆಯೋಜನೆ ಮಾಡಲು ನಿರ್ಧರಿಸಲಾಗಿದೆ. ಕನಿಷ್ಟ 10 ಜೋಡಿಗಳಾದರೂ ಆಗಮಿಸಿದರೇ ಕಾರ್ಯಕ್ರಮಕ್ಕೆ ಅರ್ಥ ಬರಲಿದೆ ಎಂದರು.

ಅಂದು ನಡೆಯುವ ಎರಡು ದಿನಗಳ ಕಾರ್ಯಕ್ರಮದಲ್ಲಿ ಗಂಗಾಪೂಜೆ, ಉತ್ಸವ, ಕುಂಭಗಳ ಮೆರವಣಿಗೆ, ಶಿವದೀಕ್ಷೆ ಹಾಗೂ ಬೃಹತ್ ಧಾರ್ಮಿಕ ಸಭೆ ಮತ್ತು ಬಸವಣ್ಣನವರ ನಾಟಕ ಕೂಡ ನಡೆಯಲಿದೆ.

ಈ ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ 18 ಕೋಮಿನ ಮುಖಂಡರ ಪೂರ್ವಭಾವಿ ಸಭೆಯನ್ನು ಕರೆದು ಕಾರ್ಯಕ್ರಮದ ಯಶಸ್ವಿಗೆ ಕೋರಲಾಗುವುದು. ಈ ಮಹಾತ್ಮರ ಗದ್ದುಗೆ ಲೋಕಾರ್ಪಣೆ ಕಾರ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು, ಸಾರ್ವಜನಿಕರು ಭಾಗವಹಿಸಬೇಕೆಂದು ಅವರು ಮನವಿ ಮಾಡಿದರು.

ಜಿಲ್ಲಾ ವೀರಶೈವ ಮಹಾಸಭಾ ಅಧ್ಯಕ್ಷ ನವಿಲೆ ಪರಮೇಶ್, ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, ತಾಲ್ಲೂಕು ಅಧ್ಯಕ್ಷ ಬೆಮ್ಮತ್ತಿ ಸುರೇಶ್ ಇದ್ದರು.

# 1.5 ಲಕ್ಷ ರೂ. ಮೌಲ್ಯದ ಬೀಟೆ ಮರ ವಶ



ಅರಕಲಗೂಡು: ತಾಲ್ಲೂಕಿನ ಹೀರೆಹಳ್ಳಿ ಮತ್ತು ರಾಮನಾಥಪುರ ರಸ್ತೆ ಮಾರ್ಗದಲ್ಲಿ ಅಕ್ರಮವಾಗಿ ಸಾಗಿಸಲಾಗುತ್ತಿದ್ದ 1.5 ಲಕ್ಷ ರೂ. ಬೆಲೆಯ ಬೀಟೆ ಮರದ ತುಂಡುಗಳ ಸಮೇತ ಮೂವರು ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದ್ದಿದ್ದಾರೆ.

ಬುಧವಾರ ರಾತ್ರಿ ಮಿನಿ ಅಶೋಕ ಲೈಲ್ಯಾಂಡ್ ವಾಹನದಲ್ಲಿ ಬೀಟೆ ತುಂಡುಗಳನ್ನು ಸಾಗಿಸುತ್ತಿರುವ ಮಾಹಿತಿ ಮೇರೆಗೆ ವಲಯ ಅರಣ್ಯ ಅಧಿಕಾರಿ ಯಶ್ಮ ಮಾಚಮ್ಮ ಅವರ ನಿರ್ದೇಶನದಂತೆ ವಾಹನವನ್ನು ಅಡ್ಡಗಟ್ಟಿ ತಪಾಸಣೆ ಮಾಡಿದಾಗ ಅಕ್ರಮ ಬೀಟೆ ಮರಗಳನ್ನು ಸಾಗಿಸುತ್ತಿರುವುದು ಪತ್ತೆಯಾಯಿತು.

ಕೂಡಲೇ ವಾಹನ ಸಮೇತ 9 ಬೀಟೆ ತುಂಡು ಹಾಗೂ ಮೂವರನ್ನು ವಶಕ್ಕೆ ಪಡೆದ್ದಿದ್ದಾರೆ. ತಾಲ್ಲೂಕಿನ ಹೀರೆಹಳ್ಳಿ ಗ್ರಾಮದ ಚಂದ್ರಶೇಖರ್, ಹಲಗನಹಳ್ಳಿ ಮಂಜುನಾಥ್, ಸಾತೇಗಾಳ ಗ್ರಾಮದ ಚಂದ್ರು ಬಂಧಿತರು.

ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯ ಅಧಿಕಾರಿ ಗುರುಸ್ವಾಮಿ, ಗಸ್ತು ಅರಣ್ಯ ಪಾಲಕ ದೇವೇಂದ್ರ, ಮಂಜುನಾಥ, ಜಗದೀಶ್, ಪ್ರಭಾಕರ್, ಚಾಲಕ ಪ್ರಕಾಶ್ ಇತರರಿದ್ದರು.

# ಸರ್ಕಾರಿ ಭೂಮಿ ಒತ್ತುವರಿ ತೆರವಿಗೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**




ಸಕಲೇಶಪುರ: ತಾಲ್ಲೂಕಿನ ದೇಖ್ಲಾ ಗ್ರಾಮದಲ್ಲಿ ಅಕ್ರಮವಾಗಿ ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕೆಂದು ರಾಮದೂತ ಹಿಂದು ಮಹಾಗಣಪತಿ ಸಮಿತಿಯಿಂದ ತಹಶೀಲ್ದಾರ್ ಅರವಿಂದ್ ಅವರಿಗೆ ಮನವಿ ಸಲ್ಲಿಸಲಾಯಿತು.

ಹಿಂದು ಮುಖಂಡ ರಘು ಮಾತನಾಡಿ, ಕಸಬಾ ಹೋಬಳಿಯ ದೇಖ್ಲಾ ಗ್ರಾಮದ ಸರ್ವೆ ನಂ. 196ರಲ್ಲಿ ಸುಮಾರು 224 ಎಕರೆ ಸರ್ಕಾರಿ ಜಾಗವಿದೆ. ಅದರಲ್ಲಿ 20 ಎಕರೆ ಭೂಮಿಯನ್ನು ಮಾಜಿ ಸೈನಿಕರಿಗೆ ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

ಹೊರಗಿನಿಂದ ಬಂದ ಕೆಲವರು ಅರಣ್ಯ ನಾಶಪಡಿಸಿ ಅಕ್ರಮವಾಗಿ ಈ ಜಾಗವನ್ನು ಕಬಳಿಸಲು ಮುಂದಾಗಿದ್ದಾರೆ. ಇದಲ್ಲದೆ, ಮಾಜಿ ಸೈನಿಕರಿಗೆ ಮೀಸಲಾಗಿರುವ ಜಾಗವನ್ನು ಸಹ ಅಕ್ರಮಣ ಮಾಡಲಾಗುತ್ತಿದೆ ಎಂದು ದೂರಿದರು.

ಗ್ರಾಮದಲ್ಲಿ ನಕಲಿ ಮತ್ತು ಪರವಾನಿಗೆ ಇಲ್ಲದ ಬಂದೂಕು, ಪಿಸ್ತೂಲ್ ದೊರಕುತ್ತಿದ್ದು, ಕಾಡುಪ್ರಾಣಿ ಹಾಗೂ ವನ್ಯಮೃಗ ಬೇಟೆ ಪ್ರಕರಣಗಳು ಹೆಚ್ಚುತ್ತಿರುವುದು ಆತಂಕ ಉಂಟುಮಾಡಿದೆ. ಈ ಬಗ್ಗೆ ಮಾಹಿತಿ ನೀಡಿದ ಸ್ಥಳೀಯರಿಗೆ ಬೆದರಿಕೆ ಹಾಕಲಾಗುತ್ತಿದೆ.

ಇತ್ತೀಚೆಗೆ ಸಾನ್ ಎಂಬಾತ ಎಮ್ಮೆಗೆ ಶೂಟೌಟ್ ಮಾಡಿ ಕೊಂದು, ಮಾಂಸವನ್ನು ಕೇರಳಕ್ಕೆ ಸಾಗಿಸಲು ಯತ್ನಿಸಿದ್ದ. ಈ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿ ಸಕಲೇಶಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಬಗ್ಗೆ ತಹಶೀಲ್ದಾರ್ ಸ್ಥಳಪರಿಶೀಲನೆ ನಡೆಸಿ, ಅಕ್ರಮ ಭೂಮಿ ಒತ್ತುವರಿ ತೆರವುಗೊಳಿಸಬೇಕು ಎಂದು ಸಮಿತಿಯ ಸದಸ್ಯರು ಆಗ್ರಹಿಸಿದ್ದಾರೆ. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ನೂರಾರು ಕಾರ್ಯಕರ್ತರು ಸ್ಥಳಕ್ಕೆ ನುಗ್ಗಿ ತಮ್ಮದೇ ಆದ ರೀತಿಯಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ರಾಮದೂತ ಹಿಂದು ಮಹಾಗಣಪತಿ ಸಮಿತಿಯ ಅಧ್ಯಕ್ಷ ಪ್ರದೀಪ್ ಪೂಜಾರಿ, ಮಂಜುನಾಥ ಕಬ್ಬಿನಗದ್ದೆ, ಗಿರೀಶ್ ಮಾರನಹಳ್ಳಿ, ವಿಜಿತ್, ರವಿ ಹೆಬ್ಬಸಾಲೆ, ವೀರೇಶ್, ಶಿವು ಜಿಪ್ಪಿ, ದೀಪಕ್, ಹರೀಶ್ ಗೌಡ, ಸುರೇಂದ್ರ ಮತ್ತು ಇತರರು ಉಪಸ್ಥಿತರಿದ್ದರು.

# ಬಾಲ್ಯ ವಿವಾಹ: ಮುಖ್ಯ ಶಿಕ್ಷಕರಿಗೂ ಎಫ್‌ಐಆರ್ ಅಧಿಕಾರ

## ಒಂದು ವರ್ಷದಲ್ಲಿ 14 ಬಾಲ್ಯ ವಿವಾಹ | 97 ಮದುವೆಗೆ ತಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಹಾಸನ: ಬಾಲ್ಯ ವಿವಾಹ ತಡೆ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಿರುವ ಸರ್ಕಾರ ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಿಸುವ ಅಧಿಕಾರವನ್ನು ಶಾಲಾ ಮುಖ್ಯ ಶಿಕ್ಷಕರು ಹಾಗೂ ಪ್ರಾಂಶುಪಾಲರಿಗೆ ನೀಡಲಾಗಿದೆ.

ಶಿಕ್ಷಕರನ್ನು ಮಕ್ಕಳ ರಕ್ಷಣಾ ಸಮಿತಿಯ ಭಾಗವಾಗಿಸಿ 2025ರ ಫೆ. 6 ರಂದು ಆದೇಶ ಹೊರಡಿಸಲಾಗಿದೆ. ತಮ್ಮ ಶಾಲೆ ಅಥವಾ ಕಾಲೇಜಿನಲ್ಲಿ ಓದುತ್ತಿರುವ ಅಪ್ರಾಪ್ತ ಮಕ್ಕಳಿಗೆ ಮದುವೆ ಮಾಡಿಸುತ್ತಿರುವ ವಿಚಾರ ಗೊತ್ತಾದರೆ ಅವರು ದೂರು ನೀಡಬಹುದು. ಬಾಲ್ಯ ವಿವಾಹ ತಡೆಗೆ ಸರ್ಕಾರ ಕಠಿಣ ಕಾನೂನು ಜಾರಿಗೊಳಿಸಿದರೂ ಜಿಲ್ಲೆಯಲ್ಲಿ 2024ರ ಏಪ್ರಿಲ್‌ನಿಂದ 2025ರ ಜನವರಿ ವರೆಗಿನ ಹತ್ತು ತಿಂಗಳಲ್ಲಿ 111 ಪ್ರಕರಣಗಳು ನಡೆದಿವೆ. ಅದರಲ್ಲಿ 97 ಬಾಲ್ಯ ವಿವಾಹಗಳನ್ನು ಮಕ್ಕಳ ರಕ್ಷಣಾ ಇಲಾಖೆ, ಮಕ್ಕಳ ಸಹಾಯವಾಣಿ ಸಿಬ್ಬಂದಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಡೆದಿದ್ದಾರೆ. 14 ಪ್ರಕರಣಗಳು ಮದುವೆಯಾದ ಬಳಿಕ ತಿಳಿದುಬಂದಿದೆ. ಈ ಸಂಬಂಧ ಪೋಕ್ಸೊ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ ಕ್ರಮ ಜರುಗಿಸಲಾಗಿದೆ.

ಅರಕಲಗೂಡು ತಾಲ್ಲೂಕಿನಲ್ಲಿ 20, ಹಾಸನ 23, ಅರಸೀಕೆರೆ 19, ಹೊಳೆನರಸೀಪುರ 22, ಚನ್ನರಾಯಪಟ್ಟಣ 13, ಬೇಲೂರು 6, ಆಲೂರು 4, ಸಕಲೇಶಪುರ ತಾಲ್ಲೂಕಿನಲ್ಲಿ 4 ಪ್ರಕರಣ ನಡೆದಿವೆ. ಅದರಲ್ಲಿ ಅರಕಲಗೂಡಿನಲ್ಲಿ 4, ಹಾಸನದಲ್ಲಿ 5, ಅರಸೀಕೆರೆ, ಚನ್ನರಾಯಪಟ್ಟಣ ಹಾಗು ಬೇಲೂರಿನಲ್ಲಿ ತಲಾ 1, ಹೊಳೆನರಸೀಪುರ ತಾಲ್ಲೂಕಿನಲ್ಲಿ 2 ಎಫ್‌ಐಆರ್ ದಾಖಲಾಗಿದೆ. ಬಾಲ್ಯ ವಿವಾಹ ತಡೆಗೆ ಜಿಲ್ಲಾಡಳಿತ ಕಠಿಣ ಕ್ರಮ ಕೈಗೊಂಡಿದ್ದು ಸರ್ಕಾರದಿಂದಲೇ ರಚನೆಯಾಗಿರುವ 1098 ಸಹಾಯವಾಣಿ ಕಟ್ಟುನಿಟ್ಟಾಗಿ ಕೆಲಸ ನಿರ್ವಹಿಸಬೇಕೆಂದು ಸೂಚನೆ ನೀಡಲಾಗಿದೆ. ದಿನದ 24 ಗಂಟೆಯು ಹೆಲ್ಪ್‌ಲೈನ್ ಸಿಬ್ಬಂದಿ ಕಾರ್ಯನಿರತರಾಗಿರುತ್ತಾರೆ. ಜಿಲ್ಲೆಯ ಯಾವುದೇ ಮೂಲೆಯಿಂದ ಬಾಲ್ಯ ವಿವಾಹಕ್ಕೆ ಸಂಬಂಧಿಸಿ ಕರೆ ಮಾಡಿದರೂ ತಕ್ಷಣವೇ ಹತ್ತಿರದ ಪೊಲೀಸರು, ಶಿಶು ಅಭಿವೃದ್ಧಿ ಅಧಿಕಾರಿ ಮೂಲಕ ಬಾಲ್ಯ ವಿವಾಹ ತಡೆಯುವಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹದ ವ್ಯಾಖ್ಯಾನ ಬದಲಾಗಿದ್ದು ಬಹುತೇಕ ಬಾಲ್ಯ ವಿವಾಹಗಳಿಗೆ ಯುವಕ-ಯುವತಿಯರ ಪ್ರೇಮವೇ ಕಾರಣ ಎನ್ನಲಾಗಿದೆ.

ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಯುವಕ-ಯುವತಿಯರು ಪ್ರೇಮದ ಬಲೆಗೆ ಬೀಳುತ್ತಾರೆ. ಆ ವಿಚಾರ ಪೋಷಕರಿಗೆ ಹೇಗೋ ಗೊತ್ತಾಗಿ ಬೇರೆ ವರ ಅಥವಾ ವಧು ಹುಡುಕಿ ಅವಸರದಲ್ಲಿ ಮದುವೆಗೆ ಮುಂದಾಗುತ್ತಾರೆ. ಪ್ರೇಮ ವಿವಾಹದಿಂದ ಅಂತಸ್ತು, ಜಾತಿಯಲ್ಲಿ ಏರುಪೇರಾಗುವುದರಿಂದ ಪೋಷಕರು ಸಾಕಷ್ಟು ಶ್ರಮವಹಿಸಿ ಪ್ರೇಮ ಪುರಾಣಕ್ಕೆ ಅಂಕುಶ ಹಾಡಿ ಆತುರದಲ್ಲಿ ತಮ್ಮದೇ ಜಾತಿಯವರನ್ನು ಹುಡುಕಿ ಮದುವೆಗೆ ಮುಂದಾಗುತ್ತಾರೆ. ಅದು ಬಾಲ್ಯ ವಿವಾಹ ಎಂಬ ಪರಿಜ್ಞಾನ ಇದ್ದರೂ ಲೆಕ್ಕಿಸದೆ ವಿವಾಹ ಕಾರ್ಯ ನೆರವೇರಿಸುತ್ತಾರೆ. ಜಿಲ್ಲೆಯಲ್ಲಿ ಬೆಳಕಿಗೆ ಬರುವ ಬಹುತೇಕ ಪ್ರಕರಣಗಳು ಹೀಗೆ ಇರುತ್ತವೆ ಎಂದು ಮಕ್ಕಳ ಸಹಾಯವಾಣಿ ಅಧಿಕಾರಿಯೊಬ್ಬರು ಹೇಳಿದರು.

# ಪ್ಯಾರಾಮೆಡಿಕಲ್ ಅರ್ಪಿತಾಗೆ ನಾಲ್ಕನೇ ರ್‍ಯಾಂಕ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ವೈದ್ಯ ನರ್ಸಿಂಗ್ ಅಂಡ್ ಪ್ಯಾರಾಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ



ವೈ.ಎಸ್. ಅರ್ಪಿತ ಅವರು 2024ನೇ ಸಾಲಿನ ತೃತೀಯ ವರ್ಷದ ಪ್ಯಾರಾಮೆಡಿಕಲ್ ನರ್ಸಿಂಗ್ ಪರೀಕ್ಷೆಯಲ್ಲಿ ರಾಜ್ಯಕ್ಕೆ ನಾಲ್ಕನೇ ರ್‍ಯಾಂಕ್ ಪಡೆದಿದ್ದಾರೆ.

2021-22ನೇ ಶೈಕ್ಷಣಿಕ ವರ್ಷದ ಎಲ್ಲಾ ವಿಷಯಗಳ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಹಂತದಲ್ಲಿ ತೇರ್ಗಡೆ ಹೊಂದಿದ್ದಾರೆ. ವಾರ್ಷಿಕ ಪರೀಕ್ಷೆಯಲ್ಲಿ ಅಂಕಗಳನ್ನು ಪರಿಗಣಿಸಿ ಮೈಸೂರು ವಲಯಕ್ಕೆ 5ನೇ ಸ್ಥಾನ ಗಳಿಸಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನ ಯಾಚೇನಹಳ್ಳಿ ಗ್ರಾಮದ ಶಿವರಾಮು ಹಾಗೂ ಮಮತಾ ಅವರ ಪುತ್ರಿ ಅರ್ಪಿತಾ ಸಾಧನೆಗೆ ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.

# ಊಟ ಬಲ್ಲವನಿಗೆ ರೋಗವಿಲ್ಲ : ಆಹಾರದಲ್ಲಿದೆ ಆರೋಗ್ಯ

**ಚೇತನ್ ಗುರೂಜಿ,**
**ಅಡಗೂರು ಯೋಗ ಕೇಂದ್ರ**



ಊಟ ಬಲ್ಲವನಿಗೆ ರೋಗವಿಲ್ಲ ಎಂಬ ಗಾದೆಯ ಹಿಂದೆ ದೊಡ್ಡ ಅರ್ಥವಿದೆ. ನಮ್ಮ ಪೂರ್ವಿಕರು ಈ ಮಾತನ್ನು ಅರ್ಥಪೂರ್ಣ ಜೀವನದ ಅನುಭವದಿಂದ ಹೇಳಿದ್ದಾರೆ. ಅವರ ಜೀವನಶೈಲಿ, ಆಹಾರ ಪದ್ಧತಿ, ಮತ್ತು ನೈಸರ್ಗಿಕವಾಗಿ ಆರೋಗ್ಯವನ್ನು ಕಾಪಾಡುವ ವಿಧಾನಗಳು ನಾವು ಕಲಿಯಬೇಕಾದ ಪಾಠಗಳಾಗಿವೆ. ಆದರೆ, ಇಂದಿನ ಜನರು ಸ್ವಯಂ-ಪ್ರಜ್ಞಾವಂತರಾಗಿದ್ದರೂ ತಮ್ಮ ಆರೋಗ್ಯದ ಬಗ್ಗೆ ಸೂಕ್ತ ಗಮನ ಹರಿಸುತ್ತಿಲ್ಲ.

ಇಂದು ರೋಗಗಳ ಹೆಚ್ಚಳಕ್ಕೆ ಆಹಾರ ಪದ್ಧತಿ ಮತ್ತು ಬದುಕಿನ ರೀತಿಯೇ ಪ್ರಮುಖ ಕಾರಣಗಳಾಗಿವೆ.

ನಾವು ಎಷ್ಟು ಆರೋಗ್ಯಕರ ಜೀವನ ನಡೆಸುತ್ತಿದ್ದೇವೆ ಎಂಬ ಪ್ರಶ್ನೆಗೆ ಖಚಿತ ಉತ್ತರ ಇಲ್ಲ.

ಈಗಿನ ಕಾಲದಲ್ಲಿ ಹೆಚ್ಚು ರೋಗಗಳು ಕಾಣಿಸಿಕೊಳ್ಳುತ್ತಿರುವುದು ಊಟ ಮಾಡುವ ವಿಧಾನ ಮತ್ತು ಸಮಯದ ಕೊರತೆಯಿಂದಲೂ ಆಗಬಹುದು. ಹಲವರು ಊಟವನ್ನು ಹಸಿವಿನ ಆಧಾರದ ಮೇಲೆ ಮಾಡುವುದಕ್ಕಿಂತ, ಸಮಯದ ಪ್ರಕಾರ ಅಥವಾ ತಿನ್ನುತ್ತಿದ್ದಾರೆ. ಇದರಿಂದ ದೇಹದ ಹಾರ್ಮೋನುಗಳು ಅಸ್ತವ್ಯಸ್ತಗೊಳ್ಳುತ್ತವೆ ಮತ್ತು ಅನೇಕ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ.

## ಮಾಡಬೇಕಾದ ಬದಲಾವಣೆ

- ಹಸಿದಾಗ ತಿನ್ನಿ: ಹೊಟ್ಟೆ ತುಂಬಿದ ಮೇಲೂ ಅನಗತ್ಯವಾಗಿ ತಿನ್ನುವುದು ತಪ್ಪು.
- ನೈಜ ಆಹಾರ ಸೇವಿಸಿ: ರಾಸಾಯನಿಕಗಳಿಂದ ತುಂಬಿದ ಜಂಕ್ ಫುಡ್ ಮತ್ತು ಪ್ರೊಸೆಸ್ಡ್ ಆಹಾರ ಸೇವನೆ ಕಡಿಮೆ ಮಾಡಿ.
- ಮಿತಾಹಾರ: ಹೆಚ್ಚು ತಿಂದು ಹೊಟ್ಟೆ ಮೇಲೆ ಒತ್ತಡ ಹಾಕಬೇಡಿ.
- ನಾಲಿಗೆಯ ತೃಪ್ತಿಗೋ ದೇಹದ ಹಿತವೋ ತಿನ್ನುವ ಮುನ್ನ ಯೋಚಿಸಿ.
- ನಮ್ಮ ಆಹಾರ ನಮ್ಮ ಔಷಧಿಯಾಗಬೇಕು, ಔಷಧಿಯೇ ಆಹಾರವಾಗಬಾರದು. ಪೂರ್ವಿಕರು ಅನುಸರಿಸಿದ್ದ ಸರಳ, ಸಾತ್ವಿಕ ಆಹಾರ ಪದ್ಧತಿ ಆರೋಗ್ಯವಂತ ಜೀವನದ ಗುಟ್ಟಾಗಿದೆ. ಈ ಲೇಖನ ಓದಿದ ಮೇಲಾದರೂ ನಾವು ನಮ್ಮ ಆಹಾರದ ಬಗ್ಗೆ ಪುನರ್ವಿಚಾರ ಮಾಡೋಣ. ಊಟ ಬಲ್ಲವನಿಗೆ ರೋಗವಿಲ್ಲ!

## ಸಂಭ್ರಮ ಮತ್ತು ಅಜ್ಞಾನ

ನಾವು ಬಹಳಷ್ಟು ಬಾರೀ ಕೇಳುವ ಒಂದು ತಪ್ಪು ತಿಳವಳಿಕೆ ಎಂದರೆ, ಸಮಯಕ್ಕೆ ತಿನ್ನದಿದ್ದರೆ ಗ್ಯಾಸ್ಟ್ರಿಕ್ ಸಮಸ್ಯೆ ಬರುತ್ತದೆ. ಆದರೆ ನಮ್ಮ ಶರೀರಕ್ಕೆ ಬೇಕಾದಾಗ ಮಾತ್ರ ಆಹಾರ ಸೇವಿಸಬೇಕೆಂದು ಪ್ರಾಚೀನ ವಿದ್ವಾಂಸರು ಹೇಳಿದ್ದಾರೆ. ಈ ವಿಷಯವನ್ನು ಶ್ರೀ ಸರ್ವಜ್ಞ ತಮ್ಮ ವಚನದಲ್ಲಿ ಹೀಗೆ ವಿವರಿಸಿದ್ದಾರೆ.

## ಆಹಾರ ಮತ್ತು ಆಯುಷ್ಯ

ಹೆಚ್ಚು ತಿಂದು ಸುಖವಾಗಿ ಬದುಕುವುದೇ ಅಥವಾ ಸರಿಯಾದ ಆಹಾರ ಪದ್ಧತಿಯನ್ನು ಅನುಸರಿಸಿ ದೀರ್ಘಾಯುಷ್ಯ ಪಡೆಯುವುದೇ? ಪರಮಪೂಜ್ಯ ಶಿವಕುಮಾರ ಮಹಾಸ್ವಾಮಿಗಳು 114 ವರ್ಷಗಳ ಕಾಲ ಆರೋಗ್ಯವಾಗಿ ಬದುಕಿದವರಲ್ಲವೇ. ಅವರ ದೀರ್ಘಾಯುಷ್ಯದ ರಹಸ್ಯ ಎಂದರೆ ಸರಳ ಮತ್ತು ಹಿತಕರ ಆಹಾರ. ಹಾಗೆಯೇ 104 ವರ್ಷ ಬದುಕುತ್ತಿರುವ ಶ್ರೀಮತಿ ಸಾಲುಮರದ ತಿಮ್ಮಕ್ಕ ಅವರ ಜೀವನವೂ ಸರಳ ಆಹಾರ ಪದ್ಧತಿಯ ಪರಿಕಲ್ಪನೆಯನ್ನು ತೋರಿಸುತ್ತದೆ.

"ಹಸಿಯದಿರೆ ಊಣ ಬೇಡ, ಹಸಿದು ಮತ್ತಿರ ಬೇಡ,
ಬಿಸಿಗೂಡಿ ತಂಗಳು ತಿನ್ನಬೇಡ, ವೈದ್ಯನ ಬೆಸಸ ಬೇಡ

ಇದು ಸ್ಪಷ್ಟಪಡಿಸುವಂತೆ, ಅತಿಯಾಗಿ ತಿನ್ನುವುದರಿಂದ ಅಥವಾ ಹೊಟ್ಟೆ ತುಂಬಿದ ಬಳಿಕ ಮತ್ತೆ ತಿನ್ನುವುದರಿಂದ ಆರೋಗ್ಯ ಹಾಳಾಗಬಹುದು.

ಶರೀರದ ಬಯಕೆ ಮತ್ತು ಹೊಟ್ಟೆಯ ಹಿತವನ್ನು ಅರಿತು ಆಹಾರ ಸೇವಿಸುವುದು ಉತ್ತಮ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248